**ದಿನಾಂಕಃ 17.01.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.**

## ಮುಂದುವರಿದ ಪಾಟೀಸವಾಲುಃ ಪ್ರತಿವಾದಿಪರ ವಕೀಲರಾದ ಶ್ರೀ ಎನ್.ಎನ್. ಅವರಿಂದ–

**17.** ಈಗ ನನಗೆ ತೋರಿದ ಅಂಚೆ ಸ್ವೀಕೃತಿ ಮೇಲಿರುವ ಸಹಿ ನನ್ನದೆ ಎಂದರೆ ಸರಿ. ಸದರಿ ದಾಖಲೆಯನ್ನು ನಿಡಿ.2 ಎಂದು ಗುರುತಿಸಲಾಯಿತು. ಇನ್ನೊಂದು ಅಂಚೆ ಸ್ವೀಕೃತಿ ಮೇಲಿರುವ ಸಹಿ ನನ್ನ ಪತಿ ಟಿ.ಆರ್. ರಾಜಶೇಖರ್ ಅವರದು ಎಂದರೆ ಇರಬಹುದು ನನಗೆ ಗೊತ್ತಾಗುತ್ತಿಲ್ಲ. ಸದರಿ ಅಂಚೆ ಸ್ವೀಕೃತಿಯಲ್ಲಿರು ವಿಳಾಸ ನನ್ನ ಪತಿಯದ್ದೇ ಎಂದರೆ ಸರಿ ಎಂದು ನುಡಿದ ಕಾರಣ ಸದರಿ ಅಂಚೆ ಸ್ವೀಕೃತಿಯನ್ನು ನಿಡಿ.3 ಎಂದು ಗುರುತಿಸಲಾಯಿತು. ಸದರಿ ನಿಡಿ.2 ಮತ್ತು 3 ದಾಖಲೆಗಳು ನಾವು ಕಳುಹಿಸಿದ ನೋಟೀಸ್ ಗೆ ಪ್ರತಿವಾದಿ ಕಳುಹಿಸಿದ್ದಂತಹ ನಿಡಿ.1 ರ ಪ್ರತ್ಯುತ್ತರ ನೋಟೀಸ್ ಕಳುಹಿಸಿರುವ ಬಗ್ಗೆ ಆಗಿದೆ ಎಂದರೆ ಅಂತಹ ಯಾವುದೇ ಪ್ರತ್ಯುತ್ತರ ನೋಟೀಸ್ ನಮಗೆ ಬಂದಿರುವುದಿಲ್ಲ.

**18.** ತರೀಕೆರೆ ಅಂಚೆ ಕಚೇರಿಯ ಸಿಬ್ಬಂದಿ ಹಾಗೂ ನಮ್ಮಗಳ ನಡುವೆ ಯಾವುದೇ ದ್ವೇಷ ಇರುವುದಿಲ್ಲ. ನಿಡಿ.1 ರಲ್ಲಿ ಕಾಣಿಸಿರುವ ವಿಳಾಸಗಳು ನಮ್ಮವೆ ಆಗಿವೆ ಸದರಿ ವ್ಯಕ್ತಿಗಳು ನಾವೇ ಆಗಿದ್ದೇವೆ ಎಂದರೆ ಸರಿ. ಪ್ರತಿವಾದಿಗಳು ನಮಗೆ ಕಳುಹಿಸಿದ್ದ ಜವಾಬು ನೋಟೀಸ್ ಅನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನಾ ಎಂದರೆ ಅದರ ಬಗ್ಗೆ ನನಗೆ ಗೊತ್ತಾಗುತ್ತಿಲ್ಲ. ಪ್ರತಿವಾದಿಗಳು ನಮಗೆ ಕಳುಹಿಸಿದ್ದ ಜವಾಬು ನೋಟೀಸ್ ಅನ್ನು ನಿಮ್ಮ ವಕೀಲರಿಗೆ ಕೊಟ್ಟಿದ್ದೀರಾ ಎಂದರೆ ಹೌದು ನಮ್ಮ ವಕೀಲರಿಗೆ ಕೊಟ್ಟಿದ್ದೇವೆ ಎನ್ನುತ್ತಾರೆ.

**19.** ನನ್ನ ವಾದಪತ್ರದ 4 ನೇ ಪ್ಯಾರಾದ ಕೊನೆಯ ಭಾಗದಲ್ಲಿ ಪ್ರತಿವಾದಿಗಳು ಯಾವುದೇ ಪ್ರತ್ಯುತ್ತರ ನೀಡಿರುವುದಿಲ್ಲ ಎಂದು ಬರೆಯಿಸಿರುತ್ತೇನೆ ಎಂದರೆ ಅದರ ವಿಚಾರ ನನಗೆ ಗೊತ್ತಾಗುತ್ತಿಲ್ಲ. ನನ್ನ ವಾದಪತ್ರದಲ್ಲಿ ಏನು ಬರೆಯಿಸಿದ್ದಾರೆ ಎಂದು ಈಗ ನನಗೆ ನೆನಪಿಲ್ಲ.

20. ಪ್ರತಿವಾದ ಪತ್ರದ 13 ನೇ ಪ್ಯಾರಾದಲ್ಲಿ ಕಾಣಿಸಿರುವ ಟಿ.ಆರ್. ಅಶೋಕ್ ಎಂದರೆ ನನ್ನ ಭಾವ. ಜ್ಯೋತಿ ಎಂದರೆ ನನ್ನ ಯಜಮಾನರ ತಂಗಿ. 1 ನೇ ಪ್ರತಿವಾದಿ ನನ್ನ ಪತಿಯ ಆಣತಿ ಮೇರೆಗೆ ಅವರ ಅಣ್ಣ ಟಿ.ಆರ್. ಅಶೋಕ್ ಅವರ ಹೆಸರಿಗೆ, ಸಹೋದರಿ ಜ್ಯೋತಿ ಅವರ ಹೆಸರಿಗೆ ಮತ್ತು ಖುದ್ದು ನನ್ನ ಪತಿ ರಾಜಶೇಖರ್ ಅವರ ಹೆಸರಿಗೆ 1 ನೇ ಪ್ರತಿವಾದಿ ಅವರ ಮೊಬೈಲ್ನ **IMPS** ಮೂಲಕ ನಿರಂತರವಾಗಿ ಹಣ ಕಳುಹಿಸುತ್ತಿದ್ದರು ಎಂದರೆ ಸುಳ್ಳು. 1 ನೇ ಪ್ರತಿವಾದಿಯಿಂದ ನನ್ನ ಪತಿ, ನನ್ನ ಭಾವ ಮತ್ತು ನನ್ನ ನಾದಿನಿಗೆ ಹಣ ಬಂದಿದ್ದರು ನಾನು ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ನನಗೆ ಅವೆಲ್ಲಾ ವಿಚಾರ ಗೊತ್ತಿಲ್ಲ, ನನ್ನ ದಾವ ಸ್ವತ್ತಿಗೆ ಮಾತ್ರ ಪರಿಹಾರ ಕೇಳುತ್ತಿದ್ದೇನೆ. ನನ್ನ ಪತಿ, ನನ್ನ ಭಾವ ಮತ್ತು ನನ್ನ ನಾದಿನಿಯರ ಬ್ಯಾಂಕ್ ಖಾತಾ ಎಕ್ಸ್ಟ್ರಾಕ್ಟ್ ಹಾಜರುಪಡಿಸಲು ಆಗುವುದಿಲ್ಲ. ಸದರಿ ಖಾತಾ ಎಕ್ಸ್ಟ್ರಾಕ್ಟ್ ಗಳನ್ನು ಹಾಜರುಪಡಿಸಿದರೆ ಹಣ ಸಂದಾಯ ಆಗಿರುವ ಸತ್ಯಾಂಶ ಹೊರಬರುತ್ತದೆ ಎಂದು ಸದರಿ ದಾಖಲಾತಿಗಳನ್ನು ಹಾಜರುಪಡಿಸಲು ಆಗುವುದಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ.

**ಮುಂದುವರಿದ ಪಾಟೀಸವಾಲು: ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಜೈಬುನ್ನಿಸಾ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.